ಬೆಂಗಳೂರು ಮಹಾನಗರ ಪಾಲಿಕೆ ಪಡೆದ ಸಾಲ

4493 - ಶ್ರೀ ಪಿ.ಸಿ. ಮೋಹನ್ ಎಂಎಲ್ಎ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *2000-2001ನೇ ಸಾಲಿನವರೆಗೆ ಬೆಂಗಳೂರು ಮಹಾನಗರ ಪಾಲಿಕೆಯು ಸಾಲದ ಮರುಪಾವತಿ ಮಾಡಬೇಕಾದ ಸಂಸ್ಥೆಗಳು ಯಾವುವು?*

ಆ) *ಇದರಲ್ಲಿ ಅಸಲು ಹಣವೆಷ್ಟು ಹಾಗೂ ಬಡ್ಡಿ ಹಣವೆಷ್ಟು? (ಸರ್ಕಾರಿ, ಅರೆಸರ್ಕಾರಿ ಹಾಗೂ ಕಾಂಟ್ರಾಕ್ಟ್‌ದಾರರ ಬಿಲ್‌ಗಳು ಸೇರಿದಂತೆ ಪೂರ್ಣ ವಿವರ ನೀಡುವುದು?*

ಇ) *ಸದರಿ ಸಾಲ ಎಂದಿನಿಂದ ಬಾಕಿ ಇದೆ?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) 1. ಹುಡ್ಕೋ

2. ಕೆ.ಯು.ಐ.ಡಿ.ಎಫ್.ಸಿ ಮತ್ತು

3. ಬಾಂಡ್ ಯೋಜನೆ

ಆ)

ಸಂಸ್ಥೆ ಹೆಸರು	ಒಟ್ಟು ಸಾಲ	ಮರುಪಾವತಿ ಆಸಲು	ಬಡ್ಡಿ	ಉಳಿದ ಸಾಲ
			(ರೂ. ಲಕ್ಷಗಳಲ್ಲಿ)	
1. ಹುಡ್ಕೋ	6539.25	1464.05	3173.89	5075.20
2. ಕೆ.ಯು.ಐ.ಡಿ.ಎಫ್.ಸಿ	5003.19	-	330.13	5003.19
ಒಟ್ಟು	**11542.44**	**1464.05**	**3504.02**	**10078.39**

125.00 ಕೋಟಿ ರೂ.ಗಳ ಬಾಂಡ್ ಮೂಲಕ ಸಂಗ್ರಹಿಸಿರುವ ಹಣಕ್ಕೆ ಜುಲೈ 2000 ರವರೆಗೆ ರೂ. 42.25 ಕೋಟಿ ಬಡ್ಡಿ ಹಣವನ್ನು ಪಾವತಿಸಲಾಗಿರುತ್ತದೆ.

ಇ) 1989-90.

ಬೆಂಗಳೂರು ಮಹಾನಗರದ ಮೇಲು ಸೇತುವೆ ನಿರ್ಮಾಣ ಕುರಿತು

4494 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಮಹಾನಗರದಲ್ಲಿ ಮೇಲು ಸೇತುವೆಯನ್ನು (ಫ್ಲೈಓವರ್)ಗಳನ್ನು ಆದಷ್ಟು ಬೇಗ ಮುಗಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?*

ಆ) *ಈಗಾಗಲೇ ಪ್ರಾರಂಭವಾಗಿರುವ ಮೇಲುಸೇತುವೆಗಳನ್ನು ಬಿಟ್ಟು ನಗರದಲ್ಲಿ ಮತ್ತೇನಾದರೂ ಮೇಲು ಸೇತುವೆಗಳನ್ನು ಕಟ್ಟಲು ಸರ್ಕಾರ ತೀರ್ಮಾನಿಸಿದೆಯೇ?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಮಹಾನಗರದಲ್ಲಿ ಮೇಲು ಸೇತುವೆಗಳನ್ನು ಪೂರ್ಣಗೊಳಿಸಲು ನಿಗದಿತ ವೇಳಾ ಪಟ್ಟಿಗಳನ್ನು ಹಾಕಿಕೊಂಡಿದ್ದು ಇದರಂತೆ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಆ) ಈಗಾಗಲೇ ಪ್ರಾರಂಭವಾಗಿರುವ ಮೇಲು ಸೇತುವೆಗಳನ್ನು ಬಿಟ್ಟು ಈ ಕೆಳಕಂಡ ಕಡೆಗಳಲ್ಲಿ ಮೇಲು ಸೇತುವೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

1. ಸೌತ್ ಎಂಡ್ ವೃತ್ತದಲ್ಲಿ ಮೇಲುಸೇತುವೆ
2. ಲಾಲ್‌ಬಾಗ್ ಪಶ್ಚಿಮದ್ವಾರದ ಕಡೆ ಮೇಲು ಸೇತುವೆ
3. ಮಿನರ್ವ ವೃತ್ತದಲ್ಲಿ
4. ಭಾರತ್ ಜಂಕ್ಷನ್
5. ಹಡ್ಸನ್ ವೃತ್ತದಲ್ಲಿ
6. ಕೆ.ಆರ್. ವೃತ್ತದಲ್ಲಿ
7. ಮಹಾರಾಣಿ ಕಾಲೇಜ್ ವೃತ್ತ
8. ಆನಂದರಾವ್ ವೃತ್ತ
9. ಮೋಡ್ ವೃತ್ತದಿಂದ ರಾಜಾಜಿನಗರ ಪ್ರವೇಶ ದ್ವಾರದವರೆಗೆ
10. ಟ್ರಿನಿಟಿ ವೃತ್ತದಲ್ಲಿ

ಬೆಂಗಳೂರು ಮಹಾನಗರ ಪಾಲಿಕೆಯ ಮೇಲು ಸೇತುವೆ

4495 - Sri P.C. Mohan (Chickpet) : Will the Hon'ble Chief Minister be pleased to state?

1. *Is it a fact that the flyovers under Megacity project undertaken by Bangalore Mahanagara Palike is being delayed? If so, what are the reasons for delay?*
2. *Due to delay in works the movement of vehicles and public have been severely effected, what alternative arrangements have been made by the Government in this regard?*
3. *Has it come to the notice of the Government that there is difference in quality of works of the Mysore Road flyover and Richmond Circle flyover?*
4. *If so, what actions has been taken by the Government to improve the quality of the works?*
5. *When they are proposed to be completed?*